# ● ಸುದ್ದಿ ಸಂಚಯ ●

## ಹೈದರಾಬಾದಿನ ರಾಮಕೃಷ್ಣ ಮಠದ ಶ್ರೀರಾಮಕೃಷ್ಣ ಮಂದಿರದ ರಜತ ಮಹೋತ್ಸವ



ಉದ್ಘಾಟನೆ

ಹೈದರಾಬಾದಿನ ರಾಮಕೃಷ್ಣ ಮಠದ ಶ್ರೀರಾಮಕೃಷ್ಣ ಮಂದಿರದ ರಜತ ಮಹೋತ್ಸವವನ್ನು ಸೆಪ್ಟೆಂಬರ್ ೨೮ರಿಂದ ೩೦ರವರೆಗೆ ವಿಜೃಂಭಣೆಯಿಂದ ಆಚರಿಸಲಾಯಿತು. ಇದರ ಅಂಗವಾಗಿ ಎರಡು ಯುವ ಸಮ್ಮೇಳನಗಳು, ಶಿಕ್ಷಕರ ಸಮಾವೇಶ ಮತ್ತು ಭಕ್ತಸಮ್ಮೇಳನಗಳು ಜರುಗಿದವು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಪರಮಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಉತ್ಸವಗಳನ್ನು ಉದ್ಘಾಟಿಸಿ, ಮೇಲಿನ ಎಲ್ಲ ಸಮ್ಮೇಳನಗಳಲ್ಲೂ ಆಶೀರ್ವಚನಗಳನ್ನು ನೀಡಿದರು. ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ಯುವಸಮ್ಮೇಳನದಲ್ಲಿ ಸ್ವಾಮಿ ನಿಖಿಲೇಶ್ವರಾನಂದಜಿ, ಸ್ವಾಮಿ ಬೋಧಮಯಾನಂದಜಿ ಭಾಷಣ ಮಾಡಿದರು. ಬಾಲಕಿಯರಿಗಾಗಿ ಏರ್ಪಡಿಸಿದ್ದ ಯುವಸಮಾವೇಶದಲ್ಲಿ ಸ್ವಾಮಿ ಚಿನ್ಮಯಾನಂದಜಿ, ಸ್ವಾಮಿ ಶಶಿಕಾಂತಾನಂದಜಿ, ಸ್ವಾಮಿ ಜಗದಾತ್ಮಾನಂದಜಿ ಮುಂತಾದ ಗಣ್ಯರು ಉಪನ್ಯಾಸಗಳನ್ನು ನೀಡಿದರು. ಶಿಕ್ಷಕರ ಸಮಾವೇಶದಲ್ಲಿ ಡಾ.ಸುಬ್ರಮಣ್ಯಂ, ಶ್ರೀ ಘೌಸ್ ಮೊಹಮ್ಮದ್ ಸಾಹೆಬ್ ಮುಂತಾದ ಗಣ್ಯರು ಭಾಗವಹಿಸಿದ್ದರು ಭಕ್ತಸಮ್ಮೇಳನದಲ್ಲಿ ಸ್ವಾಮಿ ಅಮೃತಾನಂದಜಿ, ಸ್ವಾಮಿ ರಾಘವೇಶಾನಂದಜಿ, ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ನಿತ್ಯಸ್ಥಾನಂದಜಿ, ಸ್ವಾಮಿ ದಿವ್ಯಾನಂದಜಿ ಮುಂತಾದ ಗಣ್ಯರು ಮಾರ್ಗದರ್ಶನ ನೀಡಿದರು.



ಒಂದು ಸಮಾವೇಶದ ದೃಶ್ಯ

ಕಾರ್ಯಕ್ರಮದ ಅಂಗವಾಗಿ ಹರಿಕಥೆ ಏರ್ಪಾಡಾಗಿತ್ತು. ಸ್ವಾಮೀಜಿಯವರುಗಳ ಭಜನೆ ಇತ್ತು. ಭಾರತದಾದ್ಯಂತ ಬಂದ ೫೩ ಸಂನ್ಯಾಸಿಗಳು, ಹೈದರಾಬಾದಿನ ೨೦೦೦ ವಿದ್ಯಾರ್ಥಿಗಳು, ೭೫೦ ಶಿಕ್ಷಕರು ಮತ್ತು ೨೦೦೦ ಭಕ್ತರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

## ಚೆನ್ನೈ ರಾಮಕೃಷ್ಣ ಮಿಷನ್ ವಿವೇಕಾನಂದ ಕಾಲೇಜಿನ ವಜ್ರಮಹೋತ್ಸವ



ಚೆನ್ನೈ ರಾಮಕೃಷ್ಣ ಮಿಷನ್ ವಿವೇಕಾನಂದ ಕಾಲೇಜಿನ ಕಟ್ಟಡ

ಚೆನ್ನೈ ನಗರದಲ್ಲಿರುವ ಪ್ರತಿಷ್ಠಿತ ಕಾಲೇಜುಗಳಲ್ಲಿ ರಾಮಕೃಷ್ಣ ಮಿಷನ್ ವಿವೇಕಾನಂದ ಕಾಲೇಜು ವಿಶಿಷ್ಟ ಸ್ಥಾನವನ್ನು ಹೊಂದಿದೆ. ೧೯೪೬ರಲ್ಲಿ ಸ್ಥಾಪನೆಗೊಂಡ ಈ ಕಾಲೇಜು ೬೦ ವರ್ಷಗಳನ್ನು ಪೂರೈಸಿದ ನಿಮಿತ್ತ ಹಲವಾರು ಕಾರ್ಯಕ್ರಮಗಳನ್ನು ವರ್ಷದಾದ್ಯಂತ ಹಮ್ಮಿಕೊಂಡಿತ್ತು. ಈ ಉತ್ಸವದ ಸಮಾರೋಪ ಸಮಾರಂಭಗಳು ಸೆಪ್ಟೆಂಬರ್ ತಿಂಗಳ ದಿನಾಂಕ ೭ರಿಂದ ೧೧ರವರೆಗೆ ಚೆನ್ನೈಯಲ್ಲಿ ನಡೆಯಿತು.

ಮೊದಲನೆಯ ದಿವಸದಂದು, ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿರುವ ಛತ್ತೀಸಗಢದ ರಾಜ್ಯಪಾಲರಾದ ಶ್ರೀ ಇ.ಎಸ್. ಎಲ್. ನರಸಿಂಹನ್ ಅವರು ಭಾಗವಹಿಸಿ, "ಕರ್ತವ್ಯಪರತೆ, ಶಿಸ್ತು, ಸೇವಾಮನೋಭಾವ ಮುಂತಾದ ಮೌಲ್ಯಗಳನ್ನು ಹಲವಾರು ಪೀಳಿಗೆಗಳ ವಿದ್ಯಾರ್ಥಿಗಳಲ್ಲಿ ಈ ಕಾಲೇಜು ಬಿತ್ತುತ್ತಿದೆ" ಎಂದು ಹೇಳಿದರು. ಚೆನ್ನೈ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಗೌತಮಾನಂದಜಿ ಅವರು ಸ್ವಾಮಿ ವಿವೇಕಾನಂದರು ಕರೆಕೊಟ್ಟಂತೆ, ನಿಃಸ್ವಾರ್ಥ ಸೇವೆ ಮತ್ತು ದೀನದಲಿತರ ಸಹಾಯಕ್ಕೆ ವಿದ್ಯಾರ್ಥಿಗಳು ಮುಂದೆ ಬರಬೇಕು ಎಂದರು.

ಹತ್ತನೆಯ ತಾರೀಖಿನಂದು ಏರ್ಪಡಿಸಲಾದ ಸಮಾರಂಭದಲ್ಲಿ, ಕೇರಳದ ರಾಜ್ಯಪಾಲರಾದ ಶ್ರೀ ಆರ್. ಎಲ್. ಭಾಟಿಯಾ ಅವರು ಮಾತನಾಡುತ್ತ, "ತ್ಯಾಗಮನೋಭಾವದ ಮೂಲಕ ರಾಷ್ಟ್ರನಿರ್ಮಾಣ ಕಾರ್ಯವನ್ನು ಈ ಕಾಲೇಜು ಮಾಡುತ್ತಿದೆ" ಎಂದರು. ತಮಿಳು ನಾಡು ರಾಜ್ಯದ ಹಣಕಾಸು ಸಚಿವ ಶ್ರೀ ಅನ್ಬಳಗನ್ ಅವರು, " ಸ್ವಾಮಿ ವಿವೇಕಾನಂದರ ಸಂದೇಶಗಳ ತಿರುಳು ಎಂದರೆ, ಮಾನವತೆಯ ಸೇವೆ, ಪ್ರೀತಿ ಮತ್ತು ಅನುಕಂಪೆಗಳು" ಎಂದರು.

ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳು, ಪ್ರದರ್ಶನಗಳು, ಭಾಷಣಗಳು ಜರುಗಿದ ಈ ಉತ್ಸವದ ನೇತೃತ್ವವನ್ನು ರಾಮಕೃಷ್ಣ ಮಿಷನ್ ವಿವೇಕಾನಂದ ಕಾಲೇಜಿನ ಕಾರ್ಯದರ್ಶಿಗಳಾದ ಸ್ವಾಮಿ ಆತ್ಮಘನಾನಂದಜಿ ಅವರು ವಹಿಸಿದ್ದರು.